Bruhat Bengaluru Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿಬಿಎಂಪಿ/ವಾ.22/ಜೆ.ಸಿ ಉ/ಪಿಆರ್/24/2020–21

ಸಹಾಯಕ ಅಭಿಯಂತರರ ಕಛೇರಿ
ಜೆ.ಸಿ ನಗರ ಉಪವಿಭಾಗ, ಪೂರ್ವ ವಲಯ
ವಿ. ನಾಗೇನಹಳ್ಳಿ, ವಾರ್ಡ್ ನಂ: 22
ಬೆಂಗಳೂರು 560032.
ದಿನಾಂಕ: 20/03/2021

## ದಿನಾಂಕ: 20–03–2021 ರಂದು ವಾರ್ಡ್ ಸಮಿತಿಯ ಸಭೆಯ ನಡವಳಿಗಳು:–

**ಸಭೆಗೆ ಹಾಜರಿದ್ದವರು:**

- ಶ್ರೀ. ರಾಮಕೃಷ್ಣರೆಡ್ಡಿ, ಕಾರ್ಯಪಾಲಕ ಅಭಿಯಂತರರು, ನೋಡಲ್ ಅಧಿಕಾರಿಗಳು ಹಾಗೂ ಅಧ್ಯಕ್ಷರು ವಾರ್ಡ್ ಸಮಿತಿ.
- ಶ್ರೀ. ಗುರುಸಿದ್ದಪ್ಪ .ಜಿ ಸಹಾಯಕ ಅಭಿಯಂತರರು ಹಾಗೂ ವಾರ್ಡ್ ಸಮಿತಿ ಕಾರ್ಯದರ್ಶಿ
- ಶ್ರೀ. ರಾಜಶೇಖರ .ಎನ್ ಮಾಜಿ ಪಾಲಿಕೆ ಸದಸ್ಯರು, ವಿ. ನಾಗೇನಹಳ್ಳಿ.
- ಶ್ರೀ. ಶಿವನಾಯಕ್, ಕಿರಿಯ ಆರೋಗ್ಯ ಪರಿವೀಕ್ಷಕರು, ಘನತ್ಯಾಜ್ಯ
- ಶ್ರೀ. ವಿನೋದ್, ಕಂದಾಯ ವಸೂಲಿಗಾರರು
- ಶ್ರೀ. ಮುನಿರಾಮಣ್ಣ, ಸದಸ್ಯರು
- ಶ್ರೀ. ಅಂಜದ್ ಅಹ್ಮದ್, ಕೆ.ಆರ್.ಡ್ಲ್ಯೂ.ಎ ಸದಸ್ಯರು
- ಶ್ರೀ. ಕಲೀಲ್ ರೆಹಮಾನ್, ಕೆ.ಆರ್.ಡ್ಲ್ಯೂ.ಎ ಸದಸ್ಯರು
- ಶ್ರೀ. ಚಂದ್ ಪಾಷ, ಕೆ.ಆರ್.ಡ್ಲ್ಯೂ.ಎ ಸದಸ್ಯರು
- ಶ್ರೀ. ಶೆಕ್ ರುಮಾನ್, ವಾರ್ಡ್ ಮಾರ್ಷಲ್, ವಿ. ನಾಗೇನಹಳ್ಳಿ
- ಶ್ರೀ. ರವಿ, ನಾಗರೀಕರು, ಸನ್ ರೈಸ್ ಕಾಲೋನಿ
- ಶ್ರೀ ವಿಜಯ್ ಕುಮಾರ್, ನಾಗರೀಕರು , ಯಾಗಪ್ಪ ಲೇಔಟ್
- ಶ್ರೀ. ರಮೇಶ್, ನಾಗರೀಕರು, ೫ನೇ ಕ್ರಾಸ್, ಸನ್ ರೈಸ್ ಕಾಲೋನಿ
- ಶ್ರೀ. ಡಿ. ಮುನಿರಾಜು, ನಾಗರೀಕರು, ಸಿ.ಐ.ಎಲ್ ಲೇಔಟ್
- ಶ್ರೀ. ನಾಗರಾಜು, ನಾಗರೀಕರು
- ಶ್ರೀ. ಎ.ಕೆ ಪ್ರೇಮ ಕುಮಾರ್, ನಾಗರೀಕರು ಸನ್ ರೈಸ್ ಕಾಲೋನಿ
- ಶ್ರೀ. ಮೋಹನ್ ಕುಮಾರ್, ನಾಗರೀಕರು ೪ನೇ ಕ್ರಾಸ್
- ಶ್ರೀ. ಕ್ಲಿಟ್ಮರ್, ನಾಗರೀಕರು ೪ನೇ ಕ್ರಾಸ್ ಯಾಗಪ್ಪ ಲೇಔಟ್
- ಶ್ರೀಮತಿ ಸುನಿತಾ. ಡಿ, ನಾಗರೀಕರು ೪ನೇ ಕ್ರಾಸ್ ಯಾಗಪ್ಪ ಲೇಔಟ್

- ಶ್ರೀಮತಿ ರಾಣಿ, ನಾಗರೀಕರು
- ಶ್ರೀ. ಶೈಲೇಶ್ ರೆಡ್ಡಿ, ನಾಗರೀಕರು
- ಶ್ರೀ. ಹರೀಶ್, ನಾಗರೀಕರು
- ಶ್ರೀ. ಪ್ರಶಾಂತ್ ಕುಮಾರ್, ನಾಗರೀಕರು

ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ಸಮಿತಿ ಕಾರ್ಯದರ್ಶಿಗಳಾದ ಶ್ರೀ. ಗುರುಸಿದ್ದಪ್ಪ .ಜಿ ರವರು ವಾರ್ಡ್ ಸಮಿತಿ ಅಧ್ಯಕ್ಷರು, ಸಮಿತಿಯ ಸದಸ್ಯರುಗಳು ಹಾಗೂ ವಾರ್ಡ್ ಸಂಖ್ಯೆ: 22ರ ನಾಗರೀಕರು ಹಾಗೂ ಎಲ್ಲಾ ವೃಂದದ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಸಭೆಯನ್ನು ಪ್ರಾರಂಭಿಸಿದರು.

ಶ್ರೀ. ರಾಮಕೃಷ್ಣರೆಡ್ಡಿ, ನೋಡಲ್ ಅಧಿಕಾರಿಗಳು ಸಭೆಗೆ ಹಾಜರಿದ್ದ ಅಧಿಕಾರಿ ಹಾಗೂ ಸದಸ್ಯರನ್ನು ಪರಿಚಯ ಮಾಡಿಕೊಳ್ಳುವುದರ ಮುಖಾಂತರ ಸ್ವಾಗತವನ್ನು ಕೋರಿದರು, ಹಾಗೂ ವಾರ್ಡಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲು ಎಲ್ಲರನ್ನು ಕೋರಿ ಸಭೆಯಲ್ಲಿ ನಡೆಯುವ ನಡವಳಿಗಳನ್ನು ನಮೂದಿಸಲು ತಿಳಿಸಿದರು. ಹಾಗೂ ಕಮಿಟಿ ಕಾರ್ಯದರ್ಶಿಗಳು ಮಾತನಾಡುತ್ತಾ ದಿನಾಂಕ: 06/03/2021 ರಂದು ನಡೆದ ವಾರ್ಡ್ ಸಮಿತಿಯ ನಡವಳಿಗಳನ್ನು ಪುನರಾವಲೋಕನ ಮಾಡಲಾಯಿತು. ಹಿಂದಿನ ಸಭೆಯಲ್ಲಿ ತೆಗೆದುಕೊಂಡಿದ್ದ ತೀರ್ಮಾನಗಳನ್ನು ಕುರಿತು ಈ ದಿನಾಂಕದವರೆಗೆ ನಿರ್ವಹಿಸಿದ ಕೆಲಸಗಳ ಬಗ್ಗೆ ಸದಸ್ಯರುಗಳಿಗೆ ತಿಳಿಸಲಾಯಿತು.

- ಶ್ರೀ ಗುರುಸಿದ್ದಪ್ಪ .ಜಿ ಸಹಾಯಕ ಅಭಿಯಂತರರು ರವರು ಮಾತನಾಡುತ್ತಾ ಕನಕನಗರದ 17ನೇ ಕ್ರಾಸ್, 18ನೇ ಕ್ರಾಸ್ ಹಾಗೂ 21ನೇ ಕ್ರಾಸ್‌ನವರೆಗೆ ರಸ್ತೆ ಕಾಮಗಾರಿಯನ್ನು ಪ್ರಗತಿಯಲ್ಲಿರುವ ಬಗ್ಗೆ ನೋಡೆಲ್ ಅಧಿಕಾರಿಗಳಿಗೆ ತಿಳಿಸಿದರು.
- ಶ್ರೀಮತಿ ಉಷಾರಾಣಿ, ಹಿರಿಯ ಆರೋಗ್ಯ ಪರಿವೀಕ್ಷಕರು, ರವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಇಲ್ಲಿಯ ವರೆಗೆ ೧೨೫೦ ವ್ಯಾಪಿನೇಶನ್ ಅನ್ ಹಾಕಲಾಗಿದ್ದು, ಯಾವುದೇ ಕೋವಿಡ್ +ve ಬಂದ ಕೂಡಲೇ ತಕ್ಷಣ ಆಸ್ಪತ್ರೆಗೆ ಸೇರಿಸಲಾಗುತ್ತಿದೆ ಎಂದು ತಿಳಿಸಿದರು. ಮೇಲಾಧಿಕಾರಿಗಳ ಸೂಚನೆಯಂತೆ ೫೦೦ ಕ್ಕಿಂತ ಹೆಚ್ಚು ಜನರು ಸಾರ್ವಜನಿಕರ ಸ್ಥಳಗಳಲ್ಲಿ ಸೇರುವಂತಿಲ್ಲ ಎಂದು ತಿಳಿಸುತ್ತಾ ಹಾಗೂ ಜೀಮ್, ಸ್ವೀಮಿಂಗ್ ಪೂಲ್ಸ್ ಮತ್ತು ಉದ್ಯಾನವನಗಳನ್ನು ಮುಚ್ಚುವ ಬಗ್ಗೆ ಯಾವುದೇ ಮಾಹಿತಿ ಬಂದಿರುವುದಿಲ್ಲವೆಂದು ತಿಳಿಸಿದರು.
- ನೋಡೆಲ್ ಅಧಿಕಾರಿಗಳು ಮಾತನಾಡುತ್ತಾ, ಖಾತಾ ವರ್ಗಾವಣೆ, ಖಾತಾ ನೋಂದಣಿ, ತೆರಿಗೆ ಹಣ ಪಾವತಿ, ಹೊಸದಾಗಿ ಚುನಾವಣೆ ಗುರುತೀನ ಚೀಟಿ ಮಾಡುವ ಬಗ್ಗೆ ಹಾಗೂ ಇನ್ನಿತರ ಕಂದಾಯ ಪಾವತಿಗಳ ಬಗ್ಗೆ ಸಭೆಗೆ ಹಾಜರಿದ್ದ ಕಂದಾಯ ಇಲಾಖೆಯರೊಂದಿಗೆ ಹೆಚ್ಚಿನ ಕಾರ್ಯವಿಧಾನಗಳ ಬಗ್ಗೆ ಚರ್ಚಿಸಲಾಯಿತ್ತು.
- C.I.L ಲೇಔಟ್ ನಲ್ಲಿ Eletrical pole ಅನ್ನು ಸ್ಥಳಾಂತರಿಸುವ ಬಗ್ಗೆ ಸಿ4 ನ ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿಗೆ ಪತ್ರವನ್ನು ಬರೆದಿರುವುದಾಗಿ ತಿಳಿಸಿದರು.

- ನೋಡೆಲ್ ಅಧಿಕಾರಿಗಳು ಮಾತನಾಡುತ್ತಾ, ಸನ್ ರೈಸ್ ಕಾಲೋನಿಯಲ್ಲಿ ಉಳಿದ ಎಲ್ಲಾ ಕಾಮಗಾರಿಯನ್ನು ಶ್ರೀಘ್ರವಾಗಿ ಮುಗಿಸುವಂತೆ ಶ್ರೀ ಪ್ರಸನ್ನ ಕುಮಾರ್ (ಗುತ್ತಿಗೆ ದಾರರು) ದೂರವಾಣಿ ಮೂಲಕ ರವರಿಗೆ ತಿಳಿಸಿದರು.

- ಶ್ರೀಮತಿ ಪದ್ಮಿನಿ, ನಾಗರೀಕರು ಮಾತನಾಡುತ್ತಾ, ಕನಕನಗರದ 6ನೇ 'ಎ' ಕ್ರಾಸ್ ನಲ್ಲಿ ರಸ್ತೆಗಳ ಕಾಮಗಾರಿಯನ್ನು ದುರಸ್ಥಿ ಪಡಿಸುವ ಬಗ್ಗೆ ತಿಳಿಸಿದರು. ಹಾಗೂ 6ನೇ 'ಎ' ಕ್ರಾಸ್ ರಸ್ತೆಯಲ್ಲಿ ತುರ್ತಾಗಿ ಗುಂಡಿಗಳನ್ನು ತುಂಬಲು ತಿಳಿಸಿದರು. ಅದಕ್ಕೆ ಪ್ರತಿಯಾಗಿ ನೋಡೆಲ್ ಅಧಿಕಾರಿಗಳು ವೆಟ್ ಮಿಕ್ಸ್ ಮತ್ತು ಜಲ್ಲಿಗಳಿಂದ ಗುಂಡಿಗಳನ್ನು ತುಂಬಲು ಮುಂದಿನ ಅನುದಾನದಡಿಯಲ್ಲಿ ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ ತಿಳಿಸಿದರು.

- ಸಭೆಯಲ್ಲಿ ನೋಡೆಲ್ ಅಧಿಕಾರಿಗಳು ರಸ್ತೆಗಳಲ್ಲಿ ಅಲ್ಲಲ್ಲಿ ಗುಂಡಿಗಳ್ಳು ಬಿದ್ದಿರುವುದರಿಂದ ತಮ್ಮ ಮೇಲಾಧಿಕಾರಿಗಳಿಂದ ಅನುಮತಿ ಪಡೆದು ಗುಂಡಿಗಳನ್ನು ತುಂಬಲು ಸಭೆಗೆ ಹಾಜರಿದ್ದ ಸಹಾಯಕ ಅಭಿಯಂತರರಿಗೆ ತಿಳಿಸಿದರು. ಹಾಗೂ ಶೀಘ್ರವಾಗಿ ಗುಂಡಿಗಳನ್ನು ಮುಚ್ಚುವ ಬಗ್ಗೆ ಕ್ರಮಕೈಗೊಳ್ಳುವ ಬಗ್ಗೆ ತಿಳಿಸಿದರು.

- ನೋಡೆಲ್ ಅಧಿಕಾರಿಗಳು ಮಾತನಾಡುತ್ತಾ ಮುಂದಿನ ಸಭೆಯಲ್ಲಿ street light ನವರು ತಪ್ಪದೇ ವಾರ್ಡ್ ಸಮಿತಿ ಸಭೆಗೆ ಹಾಜರಾಗಬೇಕೆಂದು ತಿಳಿಸಿದರು.

- ಶ್ರೀ. ವೆಂಕಟೇಶ್, ನಾಗರೀಕರು ಮಾತನಾಡುತ್ತಾ, ಕನಕನಗರದ 6ನೇ 'ಎ' ಕ್ರಾಸ್ ನಲ್ಲಿ Poth holes ತುಂಬಲು ತಿಳಿಸಿದರು. ಅದಕ್ಕೆ ಪ್ರತಿಯಾಗಿ ನೋಡೆಲ್ ಅಧಿಕಾರಿಗಳು ಮಾತನಾಡುತ್ತಾ ಈಗಾಗಲೇ Poth holesಗಳನ್ನು ತುಂಬಲು ಕಾಮಗಾರಿಯನ್ನು ಕೈಗೊಳ್ಳುತ್ತಿರುವ ಬಗ್ಗೆ ತಿಳಿಸಿದರು.

- ನೋಡೆಲ್ ಅಧಿಕಾರಿಗಳು ಮಾತನಾಡುತ್ತಾ, ಯಾಗಪ್ಪ ಲೇಔಟ್ 4ನೇ 'ಬಿ' ಕ್ರಾಸ್ ರಸ್ತೆಯಲ್ಲಿ ಅನಧಿಕೃತವಾಗಿ ಶೆಡ್ ಹಾಕಿರುವುದರಿಂದ ಕೂಡಲೇ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿರುವುದರಿಂದ ಈಗಾಗಲೇ ಸಂಬಂಧಪಟ್ಟವರಿಗೆ 3 ಬಾರಿ ಮೌಖಿಕವಾಗಿ ತಿಳಿಸಿದರು ಸಹ ತೆರವುಗೊಳಿಸದೇ ಇದ್ದುದರಿಂದ ಕೂಡಲೇ ಶೆಡ್ ಗಳನ್ನು ತೆರವುಗೊಳಿಸುವಂತೆ ಇನ್ನೊಮ್ಮೆ ನೋಟೀಸ್ ಅನ್ನು ಜಾರಿಗೊಳಿಸುವಂತೆ ಎಂದು ತಿಳಿಸಿದರು.

- ಶ್ರೀ. ದೀಪಕ್ ಕುಮಾರ್, ನಾಗರೀಕರು ಮಾತನಾಡುತ್ತಾ, ಕನಕನಗರದ ಮುಖ್ಯರಸ್ತೆಗಳ ಫುಟ್ ಪಾತ್ ನಲ್ಲಿ ಅನಧಿಕೃತವಾಗಿ ಜಾಗವನ್ನು ಒತ್ತುವರಿ ಮಾಡಿಕೊಂಡವರ ಮೇಲೆ ಕ್ರಮಗೊಳ್ಳುವಂತೆ ತಿಳಿಸಿದರು. ಅದಕ್ಕೆ ಪ್ರತಿಯಾಗಿ ನೋಡೆಲ್ ಅಧಿಕಾರಿಗಳು ಮಾತನಾಡುತ್ತಾ ಪುಟ್ ಬಾತ್ ಮೇಲೆ ಒತ್ತುವರಿ ಮಾಡಿಕೊಂಡಿರುವ ಜಾಗವನ್ನು ಶೀಘ್ರವಾಗಿ ಸ್ವಚ್ಚಗೊಳಿಸಲಾಗುವುದೆಂದು ತಿಳಿಸಿದರು.

- ಶ್ರೀ. ಗಂಗಾಧರ್ ಮಾತನಾಡುತ್ತಾ, ಪಟೇಲ್ ಮುನಿಯಪ್ಪ ಲೇಔಟ್ ನ 4ನೇ ಕ್ರಾಸ್ ನಲ್ಲಿ ಅಡ್ಡಮೋರಿ ನಿರ್ಮಾಣ ಮಾಡುವಂತೆ ತಿಳಿಸಿದರು. ಅದಕ್ಕೆ ಪ್ರತಿಯಾಗಿ ನೋಡೆಲ್ ಅದಿಕಾರಿಗಳು ಮಾತನಾಡುತ್ತಾ ಈಗಾಗಲೇ ಕಾಮಗಾರಿ ಪ್ರಗತಿಯಲ್ಲಿರುವ ಬಗ್ಗೆ ತಿಳಿಸಿದರು.

- ಶ್ರೀ. ಶೈಲೇಶ್ ರೆಡ್ಡಿ, ನಾಗರೀಕರು ಮಾತನಾಡುತ್ತಾ, ಕನಕನಗರದಲ್ಲಿರುವ 8ನೇ ಕ್ರಾಸ್ ರಸ್ತೆಗಳು ತೀರಾ ಹಾಳಾಗಿರುವುದರಿಂದ ಮರು ಡಾಂಬರೀಕರಣ ಮಾಡುವಂತೆ ತಿಳಿಸಿದರು.

- ಶ್ರೀಮತಿ ರಾಣಿ, ನಾಗರೀಕರು ಮಾತನಾಡುತ್ತಾ, ಕನಕನಗರದ ರೈಲ್ವೆಹಳ್ಳಿ ಹತ್ತಿರ ಕಾವೇರಿ(Pipe line) ಕಾಮಗಾರಿ ಕೆಲಸಗಳನ್ನು ಸರಿ ಮಾಡಬೇಕೆಂದು ತಿಳಿಸಿದರು. ಅದಕ್ಕೆ ನೋಡೆಲ್ ಅಧಿಕಾರಿಗಳು ಮಾತನಾಡುತ್ತಾ ಕಾಮಗಾರಿಯ ಕೆಲಸಗಳನ್ನು ಈಗಾಗಲೇ ಕೈಗೊಂಡಿರುವ ಬಗ್ಗೆ ತಿಳಿಸಿದರು.

- ನೋಡೆಲ್ ಅಧಿಕಾರಿಗಳು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಬರುವ ಎಲ್ಲ ಬೋರ್ ವೇಲ್ ರಿಪೇರಿಗಳ ಬಗ್ಗೆ ಪಟ್ಟಿಗಳನ್ನು ನೀಡುವಂತೆ ತಿಳಿಸಿದರು. ಅದಕ್ಕೆ ಪ್ರತಿಯಾಗಿ ಸಹಾಯಕ ಅಭಿಯಂತರರು ಮಾತನಾಡುತ್ತಾ ಈಗಾಗಲೇ ಬೋರ್ ವೇಲ್ ರಿಪೇರಿಗಳ ಪಟ್ಟಿಗಳ ಕಡತವನ್ನು (BWSSB) ಅಧಿಕಾರಿಗಳಿಗೆ ಸಲ್ಲಿಸಿರುವುದಾಗಿ ತಿಳಿಸಿದರು.

- ಶ್ರೀ. ಪ್ರಶಾಂತ್, ನಾಗರೀಕರು ಮಾತನಾಡುತ್ತಾ, C.I.L ಲೇಔಟ್ ನಲ್ಲಿರುವ ೫ನೇ ಕ್ರಾಸ್ ರಸ್ತೆಯಲ್ಲಿ ಒಳಚರಂಡಿ ಬ್ಲಾಕ್ ಅಗಿರುವುದರಿಂದ ಅದನ್ನು (BWSSB) ಅಧಿಕಾರಿಗಳಿಗೆ ತಿಳಿಸಿ ಸರಿಪಡಿಸುವಂತೆ ಹೇಳಿದರು.
- ನೋಡೆಲ್ ಅಧಿಕಾರಿಗಳು ಮಾತನಾಡುತ್ತಾ, ಯಾಗಪ್ಪ ಲೇಔಟ್ ಕ್ರಾಸ್ ರಸ್ತೆಯಲ್ಲಿ ಶ್ರೀ ಕ್ಲಸ್ಟರ್ ಎಂಬುವವರು ಅನಧಿಕೃತವಾಗಿ ಶೆಡ್ ಹಾಕಿರುವುದರಿಂದ ಕೂಡಲೇ ಸಂಬಂಧಪಟ್ಟವರ ಮೇಲ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿರುವುದರಿಂದ ಈಗಾಗಲೇ ಸಂಬಂಧಪಟ್ಟವರಿಗೆ ಕೂಡಲೇ ಶೆಡ್ ಗಳನ್ನು ತೆರವುಗೊಳಿಸುವಂತೆ ನೋಟೀಸ್ ಅನ್ನು ಜಾರಿಗೊಳಿಸಿರುವುದಾಗಿ ತಿಳಿಸಿದರು.
- ಶ್ರೀ. ಹರೀಶ್, ನಾಗರೀಕರು ಮಾತನಾಡುತ್ತಾ, ವಿ. ನಾಗೇನಹಳ್ಳಿ, ಮುಖ್ಯರಸ್ತೆಗಳಲ್ಲಿ ವಾಹನಗಳು ಅತಿ ವೇಗವಾಗಿ ಸಂಚಾರಿಸುತ್ತಿರುವುದರಿಂದ ರಸ್ತೆಗಳಲ್ಲಿ ರಸ್ತೆ ಉಬ್ಬು (Humps)ಗಳನ್ನು ಹಾಕುವಂತೆ ಸಂಚಾರಿ ಪೋಲೀಸ್ ಠಾಣೆಗೆ ನೋಟೀಸ್ ಅನ್ನು ಬರೆಯುವಂತೆ ತಿಳಿಸಿದರು. .

ಅಂತಿಮವಾಗಿ ಮೇಲ್ಕಂಡ ಎಲ್ಲಾ ವಿಷಯವನ್ನು ಚರ್ಚಿಸಲಾಗಿ ಹಾಗೂ ಚರ್ಚಿಸಿದ ವಿಷಯಗಳ ಬಗ್ಗೆ ಅಧಿಕಾರಿಗಳು ಮುಂದಿನ ವಾರ್ಡ್ ಸಮಿತಿ ಸಭೆಗೆ ಸಂಬಂಧಿಸಿದ ಅಧಿಕಾರಿಗಳು ಕೈಗೊಂಡ ಕ್ರಮದ ಬಗ್ಗೆ ವರದಿ ಪೂರ್ಣಗೊಂಡ ಭಾವಚಿತ್ರ ಹಾಗೂ ಲಿಖಿತ ವರದಿ ತಯಾರಿಸಿಕೊಂಡು ಹಾಜರಾಗಲು ಸೂಚಿಸಿ ಹಾಗೂ ಹಾಜರಾಗದೆ ಇರುವ ಅಧಿಕಾರಿಗಳು ಮುಂದಿನ ಸಭೆಯಲ್ಲಿ ಹಾಜರಾಗಿರಬೇಕೆಂದು ಸೂಚಿಸಿದರು. ಸಭೆಯನ್ನು ಅಧ್ಯಕ್ಷರ ಅಪ್ಪಣೆ ಮೇರೆಗೆ ವಾರ್ಡ್ ಸಮಿತಿ ಕಾರ್ಯದರ್ಶಿಗಳಾದ ಗುರುಸಿದ್ದಪ್ಪ .ಜಿ ರವರ ವಂದನಾರ್ಪಣೆಯೊಂದಿಗೆ ಮದ್ಯಾಹ್ನ 12:55ಕ್ಕೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಶ್ರೀ ರಾಮಕೃಷ್ಣರೆಡ್ಡಿ)
ನೋಡೆಲ್ ಅಧಿಕಾರಿಗಳು
ಹಾಗೂ
ವಾರ್ಡ್ ಸಮಿತಿ ಅಧ್ಯಕ್ಷರು

NODAL OFFICER
WARD NO 22
BBMP

(ಗುರುಸಿದ್ದಪ್ಪ .ಜಿ)
ವಾರ್ಡ್ ಸಮಿತಿ ಕಾರ್ಯದರ್ಶಿ
ಮತ್ತು
ಸಹಾಯಕ ಅಭಿಯಂತರರು ವಾರ್ಡ್ ನಂ:22